


ಭುವನ ಸುಂದರಿ ಸ್ಪರ್ಧೆಯಲ್ಲಿ ಆತ್ಮವಿಶ್ವಾಸದ ನಗು ಚೆಲ್ಲಿದ 'ಮಿಸ್ ಪೋರ್ಚುಗಲ್' ಮರೀನಾ ಮಚೆಟೆ

# ಸೌಂದರ್ಯಕ್ಕೊಂದು ಸುಂದರ ಕಿದ್ದುಪಡಿ

**ಭುವನ ಸುಂದರಿ ಸ್ಪರ್ಧೆಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರು ಪಾಲ್ಗೊಂಡು ತಮ್ಮ ಸಮುದಾಯ, ದೇಶವನ್ನು ಪ್ರತಿನಿಧಿಸಿದ್ದಾರೆ. ಈ ಮೂಲಕ 'ಸೌಂದರ್ಯ'ದ ಪರಿಕಲ್ಪನೆಗೆ ವಿಶೇಷ ಅರ್ಥ ದೊರಕಿಸಿಕೊಟ್ಟಿದ್ದಾರೆ.**

■ ಎಸ್ಸೆನ್

"ನಮ್ಮ ವ್ಯಕ್ತಿತ್ವವನ್ನು ಪ್ರತಿನಿಧಿಸುವಂಥ ಪದವೊಂದನ್ನು ಪರಿಚಯಿಸುವಂತೆ 'ಮಿಸ್ ಯೂನಿವರ್ಸ್ ಸ್ಪರ್ಧೆ'ಯಲ್ಲಿ ಕೇಳಲಾಗಿತ್ತು. ಅದಕ್ಕೆ ನಾನು ಆರಿಸಿಕೊಂಡ ಪದ 'ವಿಕ್ಟರಿ'. ಇದೇ ನನ್ನ ಬಗ್ಗೆ ನಾನು ಬಣ್ಣಿಸಿಕೊಳ್ಳಲು ಇರುವ ಅತಿ ಸೂಕ್ತ ಪದ. ಹುಡುಗನಾಗಿ ಹುಟ್ಟಿದ್ದ ನಾನು ಅಭದ್ರತೆಯ ನಡುವೆಯೇ ನನ್ನ ಹಾದಿಗೆ ಬಂದದ್ದೆಲ್ಲವನ್ನೂ ಗೆದ್ದೆ. ಹೆಣ್ಣಾಗಿ ಬದಲಾದ ಮೇಲೆ ನಗುವಿನಿಂದಲೇ ಎಲ್ಲವನ್ನೂ ಆತುಕೊಂಡೆ. ಈಗ ನನ್ನನ್ನು ನಾನು ನೋಡಿಕೊಂಡರೆ, ಅದೆಷ್ಟು ಗಟ್ಟಿಯಾಗಿ, ಸಬಲವಾಗಿ, ಆತ್ಮವಿಶ್ವಾಸದ ಟ್ರಾನ್ಸ್‌ವುಮನ್ ಆಗಿ ನಿಂತಿದ್ದೇನೆ ಎಂದು ಖುಷಿಯಾಗುತ್ತದೆ. ಇದೇ ನನ್ನೊಳಗಿನ ಸೌಂದರ್ಯದ ಗೆಲುವು..."

72ನೇ ಆವೃತ್ತಿಯ 'ಮಿಸ್ ಯೂನಿವರ್ಸ್' ಸೌಂದರ್ಯ ಸ್ಪರ್ಧೆಯಲ್ಲಿ ನಗುಮುಖದಿಂದಲೇ ತಮ್ಮೆಡೆಗಿನ ಜಗದ ದೃಷ್ಟಿಕೋನವನ್ನು ಬದಲಿಸುವಂತೆ ನಿಂತಿದ್ದ 22ರ ಹರೆಯದ ರೂಪದರ್ಶಿ ರಿಕಿ ವಾಲೆರಿ ಕೊಲೆ ಅವರ ಈ ಮಾತುಗಳು, ಸೌಂದರ್ಯದ ಕುರಿತ ಗ್ರಹಿಕೆಯನ್ನು ಇನ್ನಷ್ಟು ವಿಸ್ತಾರಗೊಳಿಸುವಂತಿವೆ.

ಈ ಬಾರಿ ಸ್ಯಾನ್ ಸಾಲ್ವಡಾರ್‌ನಲ್ಲಿ ನಡೆದ ಭುವನ ಸುಂದರಿ ಸ್ಪರ್ಧೆ 2023, ಹಲವು ಕಾರಣಗಳಿಂದ ಐತಿಹಾಸಿಕವಾಗಿತ್ತು. 84 ದೇಶದ ರೂಪದರ್ಶಿಗಳು ಭಾಗವಹಿಸಿದ್ದ ಈ ಜಾಗತಿಕ ಸೌಂದರ್ಯ ಸ್ಪರ್ಧೆಯಲ್ಲಿ ನೇಪಾಳದ 'ಪ್ಲಸ್ ಸೈಜ್' ಮಹಿಳೆ ಹಾಗೂ ಇಬ್ಬರು ಲಿಂಗತ್ವ ಅಲ್ಪಸಂಖ್ಯಾತರ ಪಾಲ್ಗೊಳ್ಳುವಿಕೆ, ಸ್ಪರ್ಧೆಗೆ ವಿಶೇಷ ಅರ್ಥ ತಂದುಕೊಟ್ಟಿತ್ತು.

ಸೌಂದರ್ಯ ವೈವಿಧ್ಯಕ್ಕೆ ವೇದಿಕೆಯಾಗಿರುವ ಭುವನ ಸುಂದರಿ ಸ್ಪರ್ಧೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರಾಗಿ, ತಮ್ಮ ದೇಶವನ್ನು, ತಮ್ಮ ಸಮುದಾಯವನ್ನು ಪ್ರತಿನಿಧಿಸಲು ಬಂದವರು ನೆದರ್ಲೆಂಡ್ಸ್‌ನ ರಿಕಿ ವಾಲೆರಿ ಹಾಗೂ ಪೋರ್ಚುಗಲ್‌ನ ಮರೀನಾ ಮಚೆಟೆ. ತಮ್ಮ ದೇಶಗಳಲ್ಲಿ ಹೆಜ್ಜೆಗುರುತು ಮೂಡಿಸಿ, ಜಾಗತಿಕವಾಗಿ ತಮ್ಮ ರಾಷ್ಟ್ರವನ್ನು ಪ್ರತಿನಿಧಿಸಲು ಬಂದ ಇವರಿಗೆ, ಸ್ಪರ್ಧೆಯಲ್ಲಿ ಸಾವಿರಾರು ಚಪ್ಪಾಳೆಗಳ ಸ್ವಾಗತ ದೊರೆಯಿತು. 'ಮಿಸ್ ನೆದರ್ಲೆಂಡ್ಸ್